ಕ್ಯಾದರೂ ಅನುಕೂಲವಾಗುತ್ತದೆ. ಇದರಿಂದ ವಾಸ್ತವಾಂಶವೇನೆಂಬುದು ತಿಳಿದುಕೊಂಡು ಅನಂತರ ನೀವು ತಮಿಳುನಾಡಿನ ಸರ್ಕಾರದವರ ಜೊತೆಯಲ್ಲಿ ಪತ್ರ ವ್ಯವಹಾರ ಮಾಡುವುದಕ್ಕೂ ಅನುಕೂಲವಾಗುತ್ತದೆ. ವಾಸ್ತವ ಮುಖ್ಯ ಮಂತ್ರಿಗಳವರು ಮತ್ತು ಡೆಪ್ಯುಟಿ ಲೀಡರ್‌ರವರು ತಮಿಳುನಾಡಿನ ಮುಖ್ಯ ಮಂತ್ರಿ ಶ್ರೀ ಎಂ.ಜಿ. ರಾಮಚಂದ್ರನ್‌ರವರೊಡನೆ ಮಾತನಾಡಿದರೆ, ಅವರು ತಮ್ಮ ಮೂಗಿನ ನೇರವಾಗಿ ತಮ್ಮ ಅಧಿಕಾರಿಗಳು ಏನು ಹೇಳುತ್ತಾರೆ ಹಾಗೆಯೇ ಮಾತನಾಡಿ ಬಿಡುತ್ತಾರೆ. ಇವತ್ತು ಗೂಡ್ಲೂರಿನಲ್ಲಿರತಕ್ಕವರು ನಿನ್ನೆ ಪೊನ್ನೈಯವರಲ್ಲಿ ಅವರು ನೂರಾರು ವರ್ಷಗಳಿಂದ ಇರತಕ್ಕವರು ಅಂಥವರನ್ನು ಎಬಿಕ್ಟ್ ಮಾಡಬೇಕೆಂದು ಹೊರಟಿದ್ದಾರೆ. ಅದೇ ನಮ್ಮ ಸರ್ಕಾರದಲ್ಲಿ ಯಾರು ೧೦-೨೦ ವರ್ಷಗಳಿಂದ ಬಗರ್ ಹುಕುಂ ಮಾಡಿಕೊಂಡಿದ್ದಾರೆ ಅಂಥವರಿಗೆಲ್ಲಾ ಸಾಗುವಳಿ ಚೀಟಿಯನ್ನು ಪಟ್ಟಾವನ್ನು ಕೊಟ್ಟಿದ್ದೀರಿ. ಆದುದರಿಂದ ನಿಮ್ಮ ಅಡಿಷನಲ್ ಚೀಫ್ ಸೆಕ್ರಟರಿಯವರನ್ನು ಅಥವಾ ಸೆಕ್ರಟರಿಯವರನ್ನೋ ಅಲ್ಲಿಗೆ ಕಳುಹಿಸಿ ವಾಸ್ತವಾಂಶವೇನೆಂಬುದನ್ನು ತಿಳಿದುಕೊಳ್ಳದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಬಿ. ಮಲ್ಲಿಕಾರ್ಜುನ ಖಾರ್ಗೆ.—ಅವರಿಂದ ಉತ್ತರ ಬಂದ ತಕ್ಷಣ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅನಂತರ ಅಲ್ಲಿಗೆ ನಮ್ಮ ಅಧಿಕಾರಿಗಳು ಹೋಗಬೇಕೇ ಅಥವಾ ಮುಖ್ಯ ಮಂತ್ರಿಗಳವರೇ ಅಲ್ಲಿಗೆ ಹೋಗಬೇಕು ಇಲ್ಲವೇ ಈ ಸದನದ ಸದಸ್ಯರನ್ನು ಕಳುಹಿಸುವುದಕ್ಕೆ ಏನಾದರೂ ಕಳುಹಿಸುವುದಕ್ಕೆ ವ್ಯವಸ್ಥೆ ಇದ್ದರೆ ಕಳುಹಿಸಿ ಹಗ್ಗಾಜಿನ್ ಮಾಡೋಣ.

Matter under Rule 312

Reg.—Licences issued for construction of high rise buildings

ಶ್ರೀ ಪಿ. ರಾಮಮೂರ್ತಿ.—ವಾಸ್ತವ ಅಧ್ಯಕ್ಷರೇ ಬಹು ಅಂತಸ್ತುಗಳ ಕಟ್ಟಡದ ಕರ್ಮಕಾಂಡವನ್ನು ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. "ಕಿತನಾ ಪೈಸಾ ಹೋನಾ ಚೇವ್, ಕಾಮ್ ಕರೋ" **कितना पैसा होना चेव, काम करो** ಇದನ್ನು ಮುಖ್ಯ ಮಂತ್ರಿಗಳವರ ಚೇಂಬರ್‌ನಲ್ಲಿ ಭಕ್ತಾವರ್ ಅಂಡ್ ಕಂಪೆನಿಯವರು ಹೇಳಿರತಕ್ಕ ಮಾತು. ಅಧಿಕಾರಿಗಳ ಮುಂದೆಯೇ ಈ ಮಾತನ್ನು ಅವರು ಹೇಳಿದ್ದಾರೆ. ಹೈಕೋರ್ಟಿನಲ್ಲಿ ಇವರ ಬಗ್ಗೆ ಏನು ತೀರ್ಮಾನವಾಗಿತ್ತು ಎಂದರೆ

> "While we are deeply distressed by the facts disclosed we are least impressed with the submission. If the facts disclosed by the builders were true, in deed the materials before the court prima facie indicated thus betrayed a disturbing state of affairs in the matter of grant of building licences.

Further it says :

> A serious breach of its duty by its failure to conform to the outside development plan which was binding on it and called for an enquiry by the administrator of the Government and stern follow-up action to prevent blatant violation of the plan by the licencing authority which brought the provisions of the Act to public ridicule and undermine the respect for law, the court observed."

ಈ ಜಡ್ಜ್‌ಮೆಂಟ್‌ನಲ್ಲಿ ಹೇಳಿರತಕ್ಕದ್ದನ್ನು ನೋಡಿದರೆ ಮತ್ತು ಈ ಪಾರ್ಟಿಯವರ ಚರಿತ್ರೆಯನ್ನು ನೋಡಿದರೆ ಗೊತ್ತಾಗುತ್ತದೆ ಯಾವ ರೀತಿಯಾಗಿ ಇವರಲ್ಲಿ ಭ್ರಷ್ಟಾಚಾರ ನಡೆದಿದೆ ಎನ್ನುವುದು. ೨೫೮ ಲೈಸನ್ಸ್‌ಗಳನ್ನು ತಾವು ಕೊಟ್ಟಿದ್ದೀರಿ. ಇದರಲ್ಲಿ ೧೦ ಸ್ಕೈಸ್ಕ್ರೇಪರ್ಸ್ ಬಿಲ್ಡಿಂಗ್‌ಗಳನ್ನು ಕಟ್ಟುವುದಕ್ಕೆ ಕೊಟ್ಟಿದ್ದೀರಿ ಇದರಲ್ಲಿ ಸುಮಾರು ೩ ಸಾವಿರ ಫ್ಲಾಟ್‌ಗಳನ್ನು ಕಟ್ಟುವುದಕ್ಕೆ ತಾವು ಲೈಸನ್ಸ್ ಕೊಟ್ಟಿದ್ದೀರಿ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ 'ಕಿತನಾ ಪೈಸಾ ಹೋನಾ ಚೇವ್, ಕಾಮ್ ಕರೋ' ಅಂತ ಹೇಳಿ ಯಾವ ರೀತಿಯಾಗಿ ತಮ್ಮ ಕೆಲಸವನ್ನು ಮಾಡಿಸಿಕೊಂಡಿದ್ದಾರೆ ಎಂಬುದು ಇದ

ರಿಂದಲೇ ಗೊತ್ತಾಗುತ್ತದೆ. ಒಂದು ಸ್ಕ್ವೇರ್ ಬೆಡ್ ರೂಂಗೆ 1½ ಲಕ್ಷ ರೂಪಾಯಿಗಳನ್ನು ಚಾರ್ಜ್ ಮಾಡುತ್ತಿದ್ದಾರೆ, ಎರಡೂವರೆ ಸ್ಕ್ವೇರ್ ಬೆಡ್ ರೂಂಗೆ ಎರಡೂವರೆ ಲಕ್ಷ ರೂ.ಗಳನ್ನು ೩ ಸ್ಕ್ವೇರ್, ೪ ಸ್ಕ್ವೇರ್ ಬೆಡ್ ರೂಂಗಳಿಗೆ ಮೂರುವರೆ, ನಾಲ್ಕುವರೆ ಲಕ್ಷ ರೂಪಾಯಿಗಳನ್ನು ಚಾರ್ಜ್ ಮಾಡುತ್ತಿದ್ದಾರೆ ಇನ್ನು ಜಾಸ್ತಿಯಾಗಿದೆ ಎಂದು ಮಾನ್ಯ ಡಾ॥ ಎಚ್. ಎಲ್. ತಿಮ್ಮೇಗೌಡರವರು ಹೇಳುತ್ತಿದ್ದಾರೆ. ೩ ಸಾವಿರ ಫ್ಲಾಟ್‌ಗಳಿಗೆ ೬೦-೬೫ ಕೋಟಿ ರೂ.ಗಳು ವಿರ್ಜಾಗುತ್ತದೆ. ಆದರೆ ಅವರಿಗೆ ಒಂದು ಬೆಡ್ ರೂಂನ್ನು ಕಟ್ಟುವುದಕ್ಕೆ ೮೦ ಸಾವಿರ ಖರ್ಚು ಬೀಳಬಹುದು ಆದರೆ ಅವರು ಒಂದೂವರೆ ಲಕ್ಷ ರೂಪಾಯಿಗಳನ್ನು ಚಾರ್ಜ್ ಮಾಡುತ್ತಿದ್ದಾರೆ. ೩ ಸಾವಿರ ಫ್ಲಾಟ್‌ಗಳಿಂದ ಎಷ್ಟು ಲಾಭವಾಯಿತು ತೆಂಬುದನ್ನು ತಾವೇ ಲೆಕ್ಕ ಹಾಕಿ ನೋಡಿ. ೧೦೦ ಪರ್ಸೆಂಟ್ ಪ್ರಾಫಿಟ್ ಮಾಡಿಕೊಳ್ಳುತ್ತಿದ್ದಾರೆ. ೬೦ ಕೋಟಿ ಇದರ ಮೇಲೆ ಬಂಡವಾಳ ಹಾಕಿ ೩೦ ಕೋಟಿ ಮೇಲೆ ಲಾಭ ಮಾಡಿಕೊಳ್ಳುತ್ತಿದ್ದಾರೆನ್ನುವುದಕ್ಕೆ ಈ ವಿಷಯನ್ನು ನಾನು ಹೇಳುತ್ತಿದ್ದೇನೆ. ಸ್ವಾಮಿ ಈ ಬಹುಅಂತಸ್ತುಗಳ ಕಟ್ಟಡದ ಇತಿಹಾಸ ಕಾರ್ಪೊರೇಷನ್ನಿನವರಿಗೆ ಗೊತ್ತು ಇತ್ತು. ಮೊದಲಲಿ ಲೈಸನ್ಸ್‌ನ್ನು ಇಶ್ಯೂ ಮಾಡಿದರು. ಅನಂತರ ಸೈಫುಲ್ಲಾರವರು ಅಡ್ಮಿನಿಸ್ಟ್ರೇಟರ್ ಆಗಿದ್ದಾಗ ಅದನ್ನೆಲ್ಲಾ ರಿವೋಕ್ ಮಾಡಿದರು. ರಿವೋಕ್ ಮಾಡಿದಾಗ ಅವರ ದೃಷ್ಟಿರೇ ಬೇರೆ ಇತ್ತು. ಅವರು ಇವರು ಎಲ್ಲಾ ಸೇರಿಕೊಂಡು ಏನು ಮಾಡಿದರು ಎಂದರೆ ಬಕ್ಕಾಪುರ್ ಅಂಡ್ ಕಂಪೆನಿ ಎಂದು ಮಾಡಿಕೊಂಡರು. ಏತಕ್ಕೆ ಮಾಡಿಕೊಂಡರು ಎಂದರೆ ಇದನ್ನೆಲ್ಲಾ ರೆಗ್ಯುಲರೈಜ್ ಮಾಡಿ ಟ್ರಾನ್ಸ್‌ಸ್ಯಾಕ್ಷನ್ ಮಾಡಿಕೊಳ್ಳಬೇಕೆಂದು ಕೂಡಲೇ ಕೋರ್ಟಿಗೆ ಹೋದರು. ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದರು. ಸ್ಟೇ ತೆಗೆದುಕೊಂಡು ಬರುವುದಕ್ಕಿಂತ ಮುಂಚಿತವಾಗಿ ಇದು ಆಗಿದ್ದು. ಆದಾದ ಮೇಲೆ ಏನು ಮಾಡಿದರು ಎಂದರೆ ಇದನ್ನು ಹೇಗಾದರೂ ಮಾಡಿ ರೆಗ್ಯುಲರೈಜ್ ಮಾಡಿಸೋಣ, ಹಾಗೇ ಬಿಟ್ಟರೆ ನಮಗೆಲ್ಲಾ ತೊಂದರೆಯಾಗುತ್ತದೆ ಎಂದು ಸರ್ಕಾರದವರ ಜೊತೆಯಲ್ಲಿ ಒಂದು ಒಪ್ಪಂದ ಮಾಡಿಕೊಂಡರು ಒಂದು ಸ್ಕ್ವೇರ್ ಫ್ಲಾಟ್ ಬಿಲ್ಡಿಂಗ್‌ಗಳ ಲೈಸನ್ಸ್‌ನ್ನು ಸ್ಯಾಂಕ್ಷನ್ ಮಾಡಿ ಕೊಡಬೇಕಾದರೆ ೫ ರೂಪಾಯಿ ಕೊಡಬೇಕೆಂದು ಮತ್ತು ಸಿಮೆಂಟ್‌ಗೆ ೩೦ ರೂಪಾಯಿಗಳನ್ನು ಒಂದು ಬ್ಯಾಗ್‌ಗೆ ಕೊಡಬೇಕೆಂದು ಒಪ್ಪಂದ ಮಾಡಿಕೊಂಡರು. ಯಾರು ಯಾರು ಮೆಂಬರ್ಸ್ ಇದ್ದರೋ ಅವರೆಲ್ಲರೂ ಆ ರೀತಿಯಾಗಿ ಹಣವನ್ನು ಆ ಕಂಪೆನಿಯ ಡೈರೆಕ್ಟರ್‌ರವರ ಹತ್ತಿರ ಕೊಡಬೇಕು, ಹಣ ಮುಟ್ಟಿದ ಮೇಲೆ ನಿಮಗೆ ಲೈಸನ್ಸ್ ಸಿಕ್ಕಿತು ಎಂದರೆ ಹಣ ಬಂದಿದೆ ಎಂದು ಅರ್ಥವೆಂದು ಒಪ್ಪಂದ ಮಾಡಿಕೊಂಡರು. ಮೊದಲು ಮುಖ್ಯಮಂತ್ರಿಗಳವರು ಸಿಮೆಂಟ್‌ನ್ನು ಕೊಡುವುದಕ್ಕಾಗುವುದಿಲ್ಲವೆಂದು ೧೯೮೧ರಲ್ಲಿ ಹೇಳಿಕೆ ಕೊಟ್ಟಿದ್ದರು. ಅನಂತರ ಸಿಮೆಂಟ್‌ನ್ನು ಕೊಟ್ಟಿದ್ದಾರೆ. ಫೆರಸಾ ರವರು ಕಮಿಷನರ್ ಆಗಿದ್ದಾಗ ಅವರು ಏನು ಮಾಡಿದರು ಎಂದರೆ ಸ್ಟೇ ಮಾಡಿರುವುದು ಸರಿಯಲ್ಲವೆಂದು ಹೇಳಿ ಬಿಟ್ಟು ರಿವೋಕ್ ಮಾಡಿ ಸ್ಟೇಯನ್ನು ವಿತ್ ಡ್ರಾ ಮಾಡಬೇಕೆಂದು ಹೈಕೋರ್ಟಿಗೆ ಹಾಕಿದರು. ಸ್ಟೇ ರಿವೋಕ್ ಮಾಡಿದ್ದು ವಿತ್ ಡ್ರಾ ಆಯಿತು.

೧೧-೦೦ ಎ. ಎಂ.

ಇಪತ್ತಿನ ದಿವಸ ಬೆಂಗಳೂರಿನಲ್ಲಿ ೮ ದೊಡ್ಡ ದೊಡ್ಡ ಬಿಲ್ಡಿಂಗ್‌ಗಳನ್ನು ಕಟ್ಟುತ್ತಿದ್ದಾರೆ. ಒಂದು ತಿಂಗಳಲ್ಲಿ ದುಡ್ಡು ಕೊಟ್ಟು ಲೈಸೆನ್ಸ್ ಅನ್ನು ವಂಜೂರಾಗಿಸಿಕೊಳ್ಳುತ್ತಾರೆ. ಇನ್ನೊಂದು ತಿಂಗಳಲ್ಲಿ ಕಾರ್ಪೊರೇಷನ್ನಿಗೆ ಅಪೀಲು ಹಾಕಿಕೊಳ್ಳುತ್ತಾರೆ. ಈ ರೀತಿ ಎಲ್ಲ ವ್ಯವಹಾರಗಳು ನಡೆಯುತ್ತಿವೆ. ಅದೇ ರೀತಿ, ಫೆರೇಸ ಅವರು ಬಿಲ್ಡಿಂಗ್ ಕಟ್ಟುವುದಕ್ಕೆ ಲೈಸೆನ್ಸ್ ಸಿಕ್ಕಿತ್ತೆಂದು ಲೈಸೆನ್ಸ್ ಇಲ್ಲದೆ ಕಟ್ಟಿಡ ಕಟ್ಟುವುದಕ್ಕೆ ಶುರು ಮಾಡಿದರು. ಆಮೇಲೆ ಅದನ್ನು ಒಡೆದು ಹಾಕಲಾಗಿಯುವುದೆಂದು ಡೆಮಾಲಿಷನ್ ನೋಟೀಸ್ ಇಶ್ಯೂ ಮಾಡಿದರು. ಆಗ ಅವರು ಕೋರ್ಟಿಗೆ ಹೋಗಿ ಸ್ಟೇ ತಂದರು, ನಂತರ ಕಾರ್ಪೊರೇಷನ್ನಿನವರು ಸ್ಟೇ ವೆಕೇಟ್ ಮಾಡಿಸಿದರು. ಬಿಲ್ಡಿಂಗ್ ಒಡೆದು ಹಾಕುವುದಕ್ಕೆ ಹೋದಾಗ ಸರ್ಕಾರ ಪೋಲೀಸ್ ಪ್ರೊಟೆಕ್ಷನ್ ಕೊಡಬೇಕಾಯಿತು. ಹೀಗೆ ಪೋಲೀಸ್ ಪ್ರೊಟೆಕ್ಷನ್ ಕೊಟ್ಟದ್ದನ್ನು ಪೋಲೀಸ್ ಕಮೀಷನರ್‌ರವರು ವಿತ್‌ಡ್ರಾ ಮಾಡಿದರು. ಆಗ ಆ ಮನುಷ್ಯ ಏನು ಮಾಡಿದನೆಂದರೆ, ಯಾರಾದರೂ ಅಧಿಕಾರಿಗಳು ಬಿಲ್ಡಿಂಗ್ ಹತ್ತಿರ ಬಿಲ್ಡಿಂಗ್ ಒಡೆಯುವುದಕ್ಕೆ ಬಂದರೆ ಅವರನ್ನು ಷೂಟ್ ಮಾಡುತ್ತೇನೆಂದು ಹೇಳಿದ. ರೀತಿ ರೀತಿ ಬಿಲ್ಡಿಂಗ್ ಓನರ್‌ಗಳು ಸರ್ಕಾರವನ್ನು ಮತ್ತು ಕಾರ್ಪೊರೇಷನ್ ಅನ್ನು ಹಾಗೂ ಅಧಿಕಾರಿಗಳನ್ನು ತಮ್ಮ ಜೇಬಿನಲ್ಲಿಟ್ಟುಕೊಳ್ಳುತ್ತಾರೆಂಬುದಕ್ಕೆ ಇದು ಒಂದು ಉದಾಹರಣೆ. ಆ ಸಂದರ್ಭದಲ್ಲಿ ಬಿಲ್ಡಿಂಗನ್ನು ಒಡೆದು ಹಾಕುವುದಕ್ಕೆ ಆಗಲಿಲ್ಲ. ಕಾರ್ಪೊರೇಷನ್

ಮೀಟಿಂಗ್‌ನಲ್ಲಿ ಕೇಳಿದಾಗ, ಆ ಕೇಸನ್ನು ವಿತ್‌ಡ್ರಾ ಮಾಡಿ ಮುಂದೆ ಸರ್ಕಾರಕ್ಕೆ ಬರೆದಿದ್ದೇವೆಂದರು. ಹಾಗೆ ಬಂದ ಫೈಲನ್ನು ಮುಖ್ಯ ಮಂತ್ರಿಗಳು ತಮ್ಮ ಕಡೆ ಇಟ್ಟುಕೊಂಡರು. ಈಗ ಕಾರ್ಪೊರೇಷನ್ ನವರು ಏನು ಮಾಡಬೇಕು ? ಡೆಮಾಲಿಷನ್ ಮಾಡುವುದಕ್ಕೆ ಪೋಲೀಸ್ ವ್ಯವಸ್ಥೆ ಇಲ್ಲ, ಕೇಸನ್ನು ವಿತ್‌ಡ್ರಾ ಮಾಡಿದ್ದಾರೆ. ಫೈಲು ಸರ್ಕಾರಕ್ಕೆ ಹೋಗಿ ಕುಳಿತಿದೆ. ಇದುವರೆಗೆ ಆ ಫೈಲನ್ನು ಕೊಟ್ಟಿಲ್ಲ. ಇಲ್ಲಿಗೆ ೫೦ ಲಕ್ಷ ರೂಪಾಯಿ ಸೆಟಲ್ ಆಯಿತು. ಅದಾದ ಮೇಲೆ ಮುಖ್ಯ ಮಂತ್ರಿಗಳ ಕಾರ್ಯದರ್ಶಿಯವರಾದ ಶ್ರೀ ಪಾಂಡೆಯವರು ಕಾರ್ಪೊರೇಷನ್ನಿಗೆ ಈ ರೀತಿ ಪತ್ರ ಬರೆಯುತ್ತಾರೆ ;

"The Government desires that you should not interfere in the construction of this building"

ಯಾವ ಅಡ್ಮಿನಿಸ್ಟ್ರೇಟರ್ ಆಗಲಿ, ಕಮೀಷನರ್ ಆಗಲಿ, ಕಾರ್ಪೊರೇಷನ್‌ನವರಾಗಲೀ ಹೇಗೆ ಮಾಡುತ್ತಾರೆ? Smt. Tressa was called to the Hon. Chief Minister's chamber. She was warned not to interfere in the matter. The poor lady went away. ಅವರು ಅರ್ಜಿ ಹಾಕಿ ಹೊರಟು ಹೋದರು. ಆಮೇಲೆ ಪಬ್ಲಿಸ್ಟ್ಸ್ ಕೋರ್ಟಿಗೆ ಹೋದರು. ತಮ್ಮನ್ನು ನೋಡಿದರು ಮುಖ್ಯ ಮಂತ್ರಿಗಳನ್ನು ನೋಡಿದರು, ಆದರೂ ಕೂಡ ಏನೂ ಕೆಲಸ ಆಗಲಿಲ್ಲ. ನಂತರ ಕೋರ್ಟಿಗೆ ಹೋಗಿ ಆರ್ಡರ್ ತಂದರು. ಕೋರ್ಟ್ ಜಡ್ಜ್‌ಮೆಂಟ್ ಆಗಿ ಒಂದು ತಿಂಗಳಾಯಿತು. ಅದು ಕಳೆದ ಜೂನ್‌ನಲ್ಲಿ ಬಂತು. ಆದರೆ ಇದುವರೆಗೂ ಏನು ಕ್ರಮ ಕೈಗೆ ತಳೆಯಿಲ್ಲ.

ಒಬ್ಬರು ಮಾನ್ಯ ಸದಸ್ಯರು.—ಥೆರೇಸ ಟ್ರಾನ್ಸ್‌ಫರ್ ಮಾಡಿದರು.

ಶ್ರೀ ಪಿ. ರಾಮಪ್ಪ.—ಮಾಡಿದರೂ ಕೂಡ again she pressed in the meeting of the Corporation. We the Legislators also requested the Commissioner to take action as per the judgement of the Court. ಕಮೀಷನರ್ ರವರು ಕೇಳಿದರೆ ಏನು ಹೇಳುತ್ತಾರೆಂದರೆ, ನಾನು ಏನು ಮಾಡಲಿ, ನಾನು ಸರ್ಕಾರಕ್ಕೆ ಕಾಗದ ಬರೆದಿದ್ದೇನೆ. ಸರ್ಕಾರದವರು ಇದುವರೆಗೆ ಫೈಲು ಕಳುಹಿಸಿಲ್ಲವೆಂದು ಹೇಳುತ್ತಾರೆ. ನಿಮಗೋಸ್ಕರ ಪ್ರತ್ಯೇಕವಾಗಿ ಕಾಗದ ಬರೆದರೂ ಬಂದಿಲ್ಲವೆಂದು ಹೇಳುತ್ತಾರೆ. ಸಣ್ಣ ಪುಟ್ಟ ಗಲಾಟೆಗಳನ್ನು ನಯನಗರ ಮತ್ತಿತರ ಕಡೆಗಳಲ್ಲಿ ಡೆಮಾಲಿಷ್ ಮಾಡುವ ಸಲುವಾಗಿ ಕಮೀಷನರ್‌ರವರು ನಮಗೆ ಸ್ಪೆಷಲ್ ಪೋಲೀಸ್ ಸ್ಕ್ವಾಡ್ ಕೊಡಬೇಕೆಂದು ಪತ್ರ ಬರೆದಿದ್ದಾರೆ. ಆದರೆ ಇದುವರೆಗೆ ಅವರು ಕ್ರಮ ತೆಗೆದುಕೊಳ್ಳಲು ಬೇಕಾದ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಡಲಿಲ್ಲ. ಸರ್ಕಾರದವರು ಯಾವ್ಯಾವ ಮಟ್ಟದಲ್ಲಿ ಕೊಲ್ಯೂಷನ್ ಆಗಿದೆ ಎಂಬುದನ್ನು ಯೋಚನೆ ಮಾಡಬೇಕು. ಅದಾದಮೇಲೆ, ಕಮೀಷನರ್ ಕಾಗದ ಬರೆದ ಮೇಲೆ ಮುಖ್ಯ ಮಂತ್ರಿಗಳು ಅವರನ್ನು ತಮ್ಮ ಛೇಂಬರಿಗೆ ಕರೆಯುತ್ತಾರೆ. The Commissioner is the Executive Head of the Corporation. But the Commissioner of the Corporation Sri Patnaik was warned in the Chambers of the Chief Minister not to interfere in this high rise construction. After he has warned, he says, I am helpless, I cannot do anything. ನಾವೇನಾದರೂ ಕಾನೂನು ಬಿಟ್ಟು ನಡೆಯುತ್ತೇವೆಯೇ, ಕಾನೂನು ಪ್ರಕಾರ ನಡೆದರೂ ಏತಕ್ಕೆ ಹೀಗಾಗುತ್ತದೆಂದು ಕಮೀಷನರ್‌ರವರು ಯೋಜನೆ ಮಾಡುತ್ತಾರೆ. ಇದು ಹೈರೈಸ್ ಬಿಲ್ಡಿಂಗಿಗೆ ಸಂಬಂಧಪಟ್ಟ ಹಾಗೆ ನಡೆಯುತ್ತಿಗತಕ್ಕ ಕರ್ಮಕಾಂಡ. ಈ ಬಗ್ಗೆ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಆಮೇಲೆ ಅವರು ಹೇಳುತ್ತಾರೆ, ನಾವು ನಿಮಗೆ ಇನ್ನೂ ೫೦ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ನೀವು ನಮ್ಮ ಪರವಾಗಿ ಬನ್ನಿ ಎಂದು. ಅದಾದ ಮೇಲೆ ಒಂದಲ್ಲ ಎರಡು ಕೋಟಿ ರೂಪಾಯಿ ಕೊಡುತ್ತೇವೆ, ನೀವು ಮಾತ್ರ ಹೈಕೋರ್ಟ್ ಜಡ್ಜ್‌ಮೆಂಟನ್ನು ಒಪ್ಪಿಕೊಳ್ಳಬಾರದು, ಅದನ್ನು ವಿತ್‌ಡ್ರಾ ಮಾಡಬೇಕು ಎಂದು ಹೇಳುತ್ತಾರೆ. ನೀವು ನಮಗೆ ಕೊಡತಕ್ಕದ್ದು ಕೊಟ್ಟರೆ ಆಸೆಬ್ಲಿ ಆದಮೇಲೆ ಆರ್ಡಿನೆನ್ಸ್ ಇಶ್ಯೂ ಮಾಡುತ್ತೇವೆಂದು ಹೇಳುತ್ತಾರೆ ಯಾವ ಸರ್ಕಾರವಾಗಲಿ, ಯಾವ ಕಾರ್ಪೊರೇಷನ್ ಆಗಲಿ. ಯಾವ ಅಧಿಕಾರಿಗಳಾಗಲಿ, ಯಾವ ಮಂತ್ರಿಗಳಾಗಲಿ ಹೀಗೆ ಹಣವನ್ನು ಲೂಟಿ ಮಾಡುತ್ತಿರುವಾಗ ಹೇಗೆ ಇದನ್ನು ಸಹಿಸುವುದು ? ಇದರಲ್ಲಿ ಎಷ್ಟೋ ಹಣ ನಷ್ಟವಾಗಿದೆ, ಕೋಟ್ಯಾಂತರ ರೂಪಾಯಿ ಸ್ಕ್ಯಾಂಪ್ ಡ್ಯೂಟಿಯನ್ನು ಆವಾಯಿಡ್ ಮಾಡಿದ್ದಾರೆ. ಕಾರ್ಪೊರೇಷನ್ ಅಸೆಸ್‌ಮೆಂಟ್

ನಲ್ಲಿ ಕೊಟ್ಯಾಂತರ ರೂಪಾಯಿ ಹೊಗಿದೆ. ಬ್ಲಾಕ್ ಮನಿ ಲೀನಿಂತೆ ಸೋರಿಹೊಗಿದೆ. ಆದರೆ ನಮಗೆ ಮಾತ್ರ ಯಾರೂ ಸಿಕ್ಕಿಲ್ಲ. ಒಬ್ಬೊಬ್ಬರು ೮-೧೦ ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಕೋಟ್ಯಾಂತರ ರೂಪಾಯಿ ಸಿಕ್ಕಿದೆ.

ಶ್ರೀ ಪಿ. ರಾಮದೇವ್.—ಎಲ್ಲೋ ಮೊನ್ನೆ ಸಿಕ್ಕಿದೆ. ಭ್ರಷ್ಟಾಚಾರ ದ್ಯೋತಕವಾಗಿ ನಡೆದಿದೆ. ಬೆಂಗಳೂರು ನಗರದಲ್ಲಿ ಈ ರೀತಿ ಮಾಡುವುದಕ್ಕೆ ಸರ್ಕಾರ ಅವಕಾಶ ಕೊಡುವುದನ್ನು ಒಪ್ಪುತ್ತೀರಾ ? ನಾನು ಮತ್ತು ಲಕ್ಷ್ಮೀಸಾಗರ್‌ರವರು ಕಾರ್ಪೊರೇಷನ್ ಬಿಟ್ಟಾಗ ಟೌನ್ ಪ್ಲಾನಿಂಗ್ ಅಥಾರಿಟಿ ಮುಂದೆ ಒಂದು ವ್ಯವಹಾರ ಬಂದಿತ್ತು, ಅದು ಇದುವರೆಗೆ ತೀರ್ಮಾನವಾಗಿಲ್ಲ, ಮಾಫಿಯಲ್ಲಿ ಎಲ್ಲಿ ಏನಾಗುತ್ತದೋ ಎಂಬ ಭಯ. ಇದಕ್ಕೆ ಏನನ್ನಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—''ಹೈರೈಸ್‌ದು'' ಏನಾಯಿತು ?

ಶ್ರೀ ಪಿ. ರಾಮದೇವ್.—ಅದು ತಡವಾಗಿದೆ. ಇದಕ್ಕೆ ಒಂದು ಸಿ.ಜಿ.ಐ. ಪ್ರೈಸ್ ಆಗಬೇಕು ಯಾರ್ಯಾರು ಎಷ್ಟೆಷ್ಟು ಹಣ ತೆಗೆದುಕೊಂಡಿದ್ದಾರೆಂಬುದನ್ನು ಪತ್ತೆ ಹಚ್ಚಲಿಕ್ಕೆ ಸಿ.ಬಿ.ಐ. ಪ್ರೋಬ್ ಮಾಡಬೇಕು. ೫೦ ಕೋಟಿ ರೂಪಾಯಿ ಹಣ ಹೊಡೆದರೆ ಅದರಲ್ಲಿ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಕೊಡುತ್ತಾರೆ. ಹೀಗೆ ಎಲ್ಲರನ್ನು ಕೊಂಡುಕೊಂಡು ರಾಜ್ಯವನ್ನು ಹಾಳು ಮಾಡತಕ್ಕ ಪರಿಸ್ಥಿತಿ ಬಂದಿದೆ. ಈ ಕೊಲ್ಯೂಷನ್ ಅನ್ನು ಕಂಡುಹಿಡಿಯಬೇಕಾದರೆ ಅಗತ್ಯವಾಗಿ ಸಿ.ಜಿ.ಐ. ಪ್ರೋಬ್ ಮಾಡಬೇಕೆಂದು ವಿನ್ರಯ ಪೂರ್ವಕವಾಗಿ ಹೇಳುತ್ತಿದ್ದೇನೆ. ಕಮೀಷನ್ ಆಫ್ ಎನ್‌ಕ್ವೈರಿ ಆಗಬೇಕು. ಆಗ ಎಲ್ಲ ಹೊರಗಡೆ ಬರುತ್ತದೆ. ಈ ಬಗ್ಗೆ ಸರ್ಕಾರ ಆರ್ಡಿನೆನ್ಸ್ ಇಶ್ಯೂ ಮಾಡಿ ಎಲ್ಲದನ್ನು ರೆಗ್ಯುಲರೈಸ್ ಮಾಡುತ್ತದೆಂದು ಹೇಳಿರುವುದು ಸರ್ಕಾರಕ್ಕೆ ಒಳ್ಳೆಯ ಹೆಸರು ತರತಕ್ಕದ್ದಲ್ಲ. ಇವತ್ತಿನ ದಿವಸ ನಾವು ತೊಂದರೆ ಪಡುತ್ತಿದ್ದೇವೆ, ಜನ ತೊಂದರೆ ಪಡುತ್ತಿದ್ದಾರೆ, ಆದರೆ ಬ್ಲಾಕ್‌ಮನಿ ಮಾತ್ರ ಲೀಲಾಜಾಲವಾಗಿ ಓಡಾಡುತ್ತಿದೆ, ಎಲ್ಲಿ ಕಡೆಯೂ ಭ್ರಷ್ಟಾಚಾರದ ಸಂಚು ವ್ಯಾಪಕವಾಗಿ ನಡೆದಿದೆ. ಇದರ ಬಗ್ಗೆ ಹೆಚ್ಚಿಗೆ ಹೆಳದೆ, ಧರ್ಮಸಿಂಗ್‌ರವರು ಇದರ ಬಗ್ಗೆ ತನಿಖೆಯಾಗುತ್ತಿದೆ ಎಂದು ಹೇಳಿದ್ದಾರೆ, ಇದರಲ್ಲಿ ಭ್ರಷ್ಟರು ಇಲ್ಲದಿದ್ದರೆ ನನ್ನ ಸ್ಥಾನಕ್ಕೆ ರಾಜಿನಾಮೆ ಕೊಡುತ್ತೇನೆ. ಖಂಡಿತ ಭ್ರಷ್ಟರಿದ್ದಾರೆ. ತಾವು ಸಿ.ಬಿ.ಐ. ಪ್ರೋಬ್ ಮಾಡಿ ಕಮೀಷನ್ ಆಫ್ ಎನ್‌ಕ್ವೈರಿ ಮಾಡಿ, ನಾನು ಪ್ರೂವ್ ಮಾಡಿ ತೋರಿಸುತ್ತೇನೆ, ಯಾರ್ಯಾರು ಎಷ್ಟೆಷ್ಟು ಹಣ ತೆಗೆದುಕೊಂಡಿದ್ದಾರೆಂಬುದನ್ನು ಪ್ರೂವ್ ಮಾಡುತ್ತೇನೆ. ಈ ವಿಷಯಲ್ಲಿ ಪ್ರಯತ್ನ ಮಾಡಿ ಸರ್ಕಾರದ ಮೇಲಿರುವ ಕಳಂಕವನ್ನು ತಪ್ಪಿಸಿಕೊಳ್ಳಬೇಕೆಂದು ವಿನ್ರಯಪೂರ್ವಕವಾಗಿ ಕೇಳಿ ಕೊಳ್ಳುತ್ತೇನೆ.

(ಅಧ್ಯಕ್ಷರು ಪೀಠಕ್ಕೆ ಬಂದರು)

ಶ್ರೀ ಧರ್ಮಸಿಂಗ್ (ನಗರಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಸದನದಲ್ಲಿ ಈ ವಿಷಯವನ್ನು ಮೊನ್ನೆ ಬೇಡಿಕೆ ಮೇಲೆ ಚರ್ಚೆ ಮಾಡುತ್ತಾ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಾಗ ನಾನು ಹೇಳಿದ್ದೆ. ಆಗ ಶ್ರೀ ರಾಮದೇವ್‌ರವರು ಕಲ್ಕತ್ತಕ್ಕೆ ಹೋಗಿದ್ದರು. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಬಹು ಅಂತಸ್ತಿನ ಕಟ್ಟಡಗಳು ನಿರ್ಮಾಣವಾಗುತ್ತಿವೆ ಎಂಬ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ನಾನು ಬೇಡಿಕೆ ಮೇಲೆ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಕೂಡ ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ. ಇದನ್ನು ಕೂಡ ತಿಳಿಸಬಯಸುತ್ತೇನೆ. ಈ ಬಗ್ಗೆ ಬೆಂಗಳೂರು ನಗರದಲ್ಲಿರತಕ್ಕ ಎಲ್ಲ ಶಾಸಕರ ಜೊತೆಯಲ್ಲಿ ಸಾಕಷ್ಟು ಸಲ ಸಮಾಲೋಚನೆ ಮಾಡಿದ್ದೇನೆ, ಆದರೂ ಕೂಡ ೧೯೮೦ ನಂತರ ಸರ್ಕಾರ ತೆಗೆದುಕೊಂಡ ನಿರ್ಣಯ ಬಗ್ಗೆ ಕಾರ್ಪೊರೇಷನ್ ಯಾವ ರೀತಿ ತನ್ನ ಒಂದು ಲಕ್ಷ್ಯವನ್ನು ಕೊಟ್ಟಿದೆ ಎಂಬುದನ್ನು ಹೇಳುತ್ತೇನೆ.

ಆದರೆ ಅಲ್ಲಿ ಇಲ್ಲಿ ಖಾತರಾದಷ್ಟು ಈ ರೀತಿಯ ಭೂಪಾಳ್ಲೋದಯ ಪದರಿಯ ಆಧಾರದ ಮೇಲೆ ಪದೇ ಪದೇ ಈ ಸದನದಲ್ಲಿ ಈ ರೀತಿಯ ಮಾತು ಪ್ರಸ್ತಾಪವಾಗುತ್ತಾ ಇದೆ. ಇದು ನನಗೆ ತರ್ಥವಾಗುತ್ತಿಲ್ಲ. ನಾವು ಈ ಇಲಾಖೆಯಲ್ಲಿ ದಿಟ್ಟವಾದ ನಿರ್ಣಯವನ್ನು ತೆಗೆದುಕೊಂಡಿರುವುದಕ್ಕೆ ಹೆಚ್ಚಿನ ರೀತಿಯಲ್ಲಿ ಅಭಿನಂದನೆಯನ್ನು ಸಲ್ಲಿಸಬೇಕಾಗಿತ್ತು. ಆದರೆ ಸಲ್ಲಿಸಿಲ್ಲ. ಇವತ್ತಿಗೆ ಬೆಂಗಳೂರು ನಗರದಲ್ಲಿ ೨೪೮ ಬೈ ರೈಸ್ ಕಟ್ಟಡಗಳಿಗೆ ಲೈಸೆನ್ಸ್ ಕೊಡಲಾಗಿದೆ. ನಿರ್ಣಯಕ್ಕಿಂತ ಮುಂಚೆ ೧೨೬ ಕಟ್ಟಡಗಳಿಗೆ ಲೈಸೆನ್ಸ್ ಕೊಡಲಾಗಿದ್ದು ನಿರ್ಣಯ ನಡೆಯುವುದಕ್ಕೆ ೧೩ ಕಟ್ಟಡಗಳಿಗೆ ಲೈಸೆನ್ಸ್ ಕೊಡ

ಲಾಗಿದೆ. ಇದರಲ್ಲಿ ರೆಸಿಡೆನ್ಷಿಯಲ್ ಹೈ ರೈಸ್ ಬಿಲ್ಡಿಂಗ್‌ಗೆ ಕೇವಲ ೫೨ ಕಟ್ಟಡಗಳಿಗೆ ಲೈಸೆನ್ಸ್ ಕೊಡ ಲಾಗಿದೆ. ೧೯೮೧ರ ನವೆಂಬರ್‌ನಿಂದ ಇಲ್ಲಿಯವರೆಗೆ ಸುಮಾರು ೨ ವರ್ಷಗಳ ಅವಧಿಯಲ್ಲಿ ಆ ರೀತಿ ಲೈಸೆನ್ಸ್ ಕೊಡುವುದನ್ನು ನಿಲ್ಲಿಸಲಾಗಿದೆ, ಪ್ಯಾಲೇಸ್ ಆರ್ಚರ್ಡ್‌ನಲ್ಲಿ ರೆಸಿಡೆನ್ಷಿಯಲ್ ಹೈರೈಸ್ ಬಿಲ್ಡಿಂಗ್‌ಗೆ ಪರ್ಮಿಷನ್ ಕೊಟ್ಟಮೇಲೆ ಸಾಕಷ್ಟು ಜನರಿಂದ ರೆಪ್ರಸೆಂಟೇಷನ್ ಬಂತು. ನಂತರ ಕಾರ್ಪೊರೇಷನ್ ಅಡ್ಮಿನಿಸ್ಟ್ರೇಟರ್ ಮತ್ತು ಕಮಿಷನರ್ ಅವರೊಡನೆ ಸಮಾಲೋಚಿಸಿ ರೆಸಿಡೆನ್ಷಿಯಲ್ ಏರಿಯಾದಲ್ಲಿ ಆದಕ್ಕೆ ಅವಕಾಶ ಕೊಡಬಾರದೆಂದು ತೀರ್ಮಾನಿಸಿ ಭಕ್ತವರ್ ಕನ್‌ಸ್ಟ್ರಕ್ಷನ್ಸ್ ಮತ್ತಿತರಿಗೆ ಪರ್ಮಿಷನ್ ಕೊಟ್ಟಿದ್ದನ್ನು ಹಿಂತೆಗೆದುಕೊಂಡೂ ಕಟ್ಟಡದ ಕೆಲಸವನ್ನು ನಿಲ್ಲಿಸಲಾಯಿತು. ನಂತರ ಅವರು ಕೋರ್ಟಿಗೆ ಹೋದರು. ಅದಾದಮೇಲೆ ಎಗ್ಸಿಕ್ಯುಟೀವ್ ಆರ್ಡರ್ ಮಾಡಿ ಎಲ್ಲೆಲ್ಲಿ ಹೈರೈಸ್ ಬಿಲ್ಡಿಂಗ್ ಪರ್ಮಿಷನ್ ಕೊಡಲಾಗಿದೆ ಅದನ್ನು ವಾಪಸ್ ತೆಗೆದುಕೊಂಡಿದ್ದೇವೆ. ೪೦ ಅಡಿ ರಸ್ತೆ ಇದ್ದರೆ ಕಾರ್ ಪಾರ್ಕಿಂಗ್‌ಗೆ ಎಷ್ಟು ಜಾಗ ಕೊಡಬೇಕು ಅದಕ್ಕಿಂತ ಕಡಿಮೆ ಇದ್ದರೆ ಎಷ್ಟು ಜಾಗ ಕೊಡಬೇಕು ಎಂಬುದನ್ನು ಲೆಕ್ಕಾಚಾರ ಹಾಕದೆ ಒಂದು ವೇಳೆ ಬೆಂಕಿ ಅನಾಹುತವಾದರೂ ಫೈರ್ ವ್ಯಾನ್ ಹೋಗುವುದಕ್ಕೆ ಆಗದಂತೆ ಕಟ್ಟಡಗಳನ್ನು ಕಟ್ಟುತ್ತಿದ್ದರು. ಆದ್ದರಿಂದ ಬೈಲಾ ಬದಲಾವಣೆ ಮಾಡಬೇಕೆಂಬ ಉದ್ದೇಶದಿಂದ ಎರಡು ವರ್ಷದ ಅವಧಿಯಲ್ಲಿ ಒಂದು ಕಟ್ಟಡಕ್ಕೂ ಕೂಡ ಸ್ಯಾಂಕ್ಷನ್ ಕೊಟ್ಟಿಲ್ಲ. ಬೇಸ್‌ಮೆಂಟ್‌ಗೂ ಅವಕಾಶ ಕೊಡಕೂಡದೆಂದು ಸೂಚನೆ ಕೊಟ್ಟಿದ್ದೇವೆ. ನಾವು ಈ ವಿಷಯದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಂಡಿದ್ದೇವೆ. ಆದರೆ ಶಾಸನಸಭೆಯಲ್ಲಿ ಇದೇ ವಿಷಯಕ್ಕೆ ರಾಜೀನಾಮೆ ಕೊಡುತ್ತೇನೆಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಇವತ್ತಿನ ದಿವಸ ಮೊದಲನೇ ಮಹಡಿಗೆ ನೀರು ಕೊಡುವುದಕ್ಕಾಗುತ್ತಿಲ್ಲ ಕಾವೇರಿ ಯೋಜನೆಯ ಎರಡನೆಯ ಹಂತ ಮುಗಿದರೂ ನೀರು ಕೊಡಲಾರದಂಥ ಪರಿಸ್ಥಿತಿ ಇರುವುದರಿಂದ ಯಾವ ಪ್ರದೇಶದಲ್ಲಿ ಯಾವರೀತಿ ಕಟ್ಟಡಗಳಿಗೆ ಅವಕಾಶ ಕೊಡಬೇಕೆಂಬ ಬಗ್ಗೆ ಈಗಾಗಲೇ ಕಮಿಷನರ್ ಮಟ್ಟದಲ್ಲಿ ೮-೧೦ ಮೀಟಿಂಗ್‌ಗಳನ್ನು ಮಾಡಲಾಗಿದೆ, ಕಾರ್ಯದರ್ಶಿಯವರ ಮಟ್ಟದಲ್ಲಿ ಎರಡು ಸಾರಿ ಮೀಟಿಂಗ್ ಮಾಡಲಾಗಿದೆ. ಫ್ಯೂಚರ್ ಫ್ಯೂಚರ್ ಬಗ್ಗೆ ಗೃಹ ಖಾತೆಗೆ ಕಳುಹಿಸಿಕೊಟ್ಟಿದ್ದೇವೆ. ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಅಮೆಂಡ್‌ಮೆಂಟ್ ತರುತ್ತಿದ್ದೇವೆ. ಈ ವಿಚಾರದಲ್ಲಿ ಯಾವುದೇ ಅವ್ಯವಹಾರವನ್ನೂ ನಾವು ಮಾಡಿಲ್ಲ. ಕಟ್ಟಡಗಳಿಗೆ ಪರ್ಮಿಷನ್ ಕೊಡುವವರು ಕಾರ್ಪೊರೇಷನ್ ಕಮಿಷನರ್‌ರವರು. ನಾವು ಸರ್ಕಾರದ ವತಿಯಿಂದ ಡೈರೆಕ್ಷನ್ ಕೊಟ್ಟು ಹೈರೈಸ್ ಬಿಲ್ಡಿಂಗ್‌ಗೆ ಪರ್ಮಿಷನ್ ಕೊಡಿ ಎಂದು ಹೇಳಿಲ್ಲ. ಎರಡು ವರ್ಷದ ಅವಧಿಯಲ್ಲಿ ಏನೇನೋ ನಡೆದುಹೋಗಿದೆ ಎಂದು ಮಾನ್ಯ ಸದಸ್ಯರು ಆರೋಪಣೆ ಮಾಡಿದ್ದಾರೆ. ಎರಡು ವರ್ಷದ ಅವಧಿಯಲ್ಲಿ ಇರಿಥ ಕಡೆ ಹಸ್ತಕ್ಷೇಪ ಮಾಡಿದ್ದೀರಿ ಎಂದು ನೇರವಾದ ಆರೋಪ ಇದ್ದರೆ ಮಾಡಬಹುದು. ನಾವು ಒಂದು ವೇಳೆ ಹಾಗೆ ಮಾಡಬೇಕೆಂದಿದ್ದರೆ ಅದನ್ನು ನಿಲ್ಲಿಸುವುದಕ್ಕೆ ಹೋಗುತ್ತಿರಲಿಲ್ಲ. ಅವಕಾಶ ಕೊಡಬಹುದಾಗಿತ್ತು. ಸುಮ್ಮನೆ ಆರ್ಡಿನೆನ್ಸ್ ಬರುತ್ತದೆಂದು ಊಹಾಪೋಹದ ಮೇಲೆ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಹೋಗಬಾರದು. ಪವರ್‌ಫುಲ್ ಲಾಬಿಗೆ ಯೀಲ್ಡ್ ಆಗುವಹಾಗಿದ್ದರೆ ಎರಡು ವರ್ಷದ ಅವಧಿಯಲ್ಲಿ ಆಗಬಹುದಾಗಿತ್ತು. ಆದರೆ ನಾವು ಆಗಿಲ್ಲ. ಸರ್ಕಾರ ಈ ವಿಷಯದಲ್ಲಿ ದಿಟ್ಟ ನಿಲುವನ್ನು ತೆಗೆದುಕೊಂಡು ಕರ್ನಾಟಕ ಇತಿಹಾಸದಲ್ಲಿ ಮೊಟ್ಟಮೊದಲನೆಯ ಭಾರಿಗೆ ಬೆಂಗಳೂರು ನಗರದಲ್ಲಿ ಹೈರೈಸ್ ಬಿಲ್ಡಿಂಗ್ ಕಟ್ಟುವುದಕ್ಕೆ ಅವಕಾಶ ಕೊಡದೆ ಆಗತಕ್ಕ ಅನಾಹುತದ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಭಕ್ತವರ್ ಕನ್‌ಸ್ಟ್ರಕ್ಷನ್ಸ್‌ನವರು ಏನು ಮಾಡಿದ್ದಾರೆ ಎಂದು ಕೋರ್ಟಿನಲ್ಲಿ ಹೇಳಿದ್ದಾರೆ. ಆ ಬಗ್ಗೆ ಜಡ್ಜ್‌ಮೆಂಟ್ ಕೂಡ ಬಂದಿದೆ. ಅದರ ಪ್ರತಿ ನಮಗಿನ್ನೂ ಬಂದಿಲ್ಲ. ಮೂರು ಅಂತಸ್ತಿಗಿಂತ ಜಾಸ್ತಿ ಒಡೆದುಹಾಕಬೇಕೆಂದು ಆಜ್ಞೆ ಬಂದರೆ ಅದನ್ನು ಮಾಡಲು ನಾವು ಸಿದ್ಧರಾಗಿದ್ದೇವೆ ಎಂಬ ಮಾತನ್ನು ಅವರು ಹೇಳಿದ್ದಾರೆ. ಕೋರ್ಟಿನಿಂದ ಜಡ್ಜ್‌ಮೆಂಟ್ ಪ್ರತಿ ಕೇಳಿಬ್ದು ಅದು ಬಂದನಂತರ ನಾವು ಪರೀಕ್ಷೆ ಮಾಡುತ್ತೇವೆ. ಯಾವುದೇ ಪಕ್ಷಪಾತ ಇಲ್ಲದೆ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಪ್ರಮುಖವಾಗಿ ಬೆಂಗಳೂರು ನಗರದ ಸಮಸ್ಯೆಯನ್ನು ಬಿಡಿಸುವುದರಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಶಾಸಕರೂ ಕೂಡ ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಈ ಬಗ್ಗೆ ಏನೇನು ಆಪಾದನೆಗಳನ್ನು ಮಾಡಿದ್ದಾರೆ, ಅದು ಸತ್ಯಕ್ಕೆ ದೂರವಾದುದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹೈರೈಸ್ ಬಿಲ್ಡಿಂಗ್‌ಗಳು ನಿರ್ಮಾಣವಾಗಿವೆ. ಅದರಲ್ಲಿ ಏನೂ ಸಂಶಯವಿಲ್ಲ. ಕೆಲವು ಪೂರ್ಣವಾಗಿವೆ, ಇನ್ನು ಕೆಲವು ಕಾಲು ಭಾಗ, ಅರ್ಧ ಆಗಿದೆ. ಕಾರ್ಪೊರೇಷನ್ನಿ

ನವರು ಇವಕ್ಕೆ ಪರ್ಮಿಷನ್ ಕೊಟ್ಟಿದ್ದಾರೆಂಬ ಮಾತನ್ನು ನೀವೂ ಒಪ್ಪಿಕೊಂಡಿದ್ದೀರಿ. ತಾವೇ ಹೇಳುತ್ತೀರಿ. ಈ ವಿಚಾರದಲ್ಲಿ ನಮ್ಮ ಕೈವಾಡ ಇಲ್ಲ ಎಂದು. ಸರ್ಕಾರದ ಕ್ರಮಕ್ಕೆ ಅಭಿನಂದನೆ ಸಲ್ಲಿಸಬೇಕು ಎಂದು ಹೇಳಿದ್ದೀರಿ. ನಿಮ್ಮ ವಾದಸರಣಿಯನ್ನು ಒಪ್ಪಿಕೊಳ್ಳುವುದಾದರೆ ೨೦೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಹೈರೈಸ್ ಬಿಲ್ಡಿಂಗ್‌ಗೆ ಪರವಾನಗಿ ಕೊಟ್ಟವರು ಯಾರು? ಕಾನೂನಿಗೆ ವಿರುದ್ಧವಾಗಿ ಯಾರು ಯಾರು ಕೊಟ್ಟಿದ್ದಾರೆ? ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಏನು ಅಡ್ಡಿ ಇದೆ?

ಅಧ್ಯಕ್ಷರು.—೧೯೮೦ಕ್ಕಿಂತ ಮುಂಚೆ ಪರ್ಮಿಷನ್ ಕೊಟ್ಟಿದ್ದು ಎಂದರೆ ಯಾರು ಎಂಬುದೂ ಗೊತ್ತಾಗುತ್ತದಲ್ಲ?

SRI A. LAKSHMISAGAR.—I do not want to dilate upon it. But, it is an admitted fact that these licences have been granted by virtue of such grants.....

ಅಧ್ಯಕ್ಷರು.—ಅವರು ಇಲ್ಲ ಎಂದು ತೇಳಲಿಲ್ಲ. ೧೯೮೦ಕ್ಕಿಂತ ಮುಂಚೆ ಕಾರ್ಪೊರೇಷನ್ ಕೊಟ್ಟಿದೆ ಎಂದು ಹೇಳಿದ್ದಾರೆ.

ಶ್ರೀ ಲಕ್ಷ್ಮೀಸಾಗರ್.—ಕಾನೂನಿಗೆ ವಿರುದ್ಧವಾಗಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಆದ್ದರಿಂದ ಅದನ್ನು ಕೊಟ್ಟವರು ಯಾರು? ಯಾರ ಪ್ರಭಾವಕ್ಕೆ ಒಳಗಾಗಿ ಪರವಾನಗಿ ಕೊಟ್ಟರು ಎಂಬುದು ವಿಚಾರಣೆ ಆಗಬೇಕಲ್ಲ? ಇನ್ನು ಮೇಲೆ ಈ ರೀತಿ ಗಬಾರದು ಎಂಬ ಉದ್ದೇಶವಿದ್ದರೆ ಅದನ್ನು ತಡೆಗಟ್ಟಬೇಕು ಎಂಬ ಕಳಕಳಿ ಇದ್ದರೆ ಇದರ ಬಗ್ಗೆ ವಿಚಾರಣೆ ಆಗಬೇಕಾದುದು ಸಾಮಾನ್ಯವಾದುದು. ಏತಕ್ಕೆ ವಿಚಾರಣೆಗೆ ಒಪ್ಪಿಕೊಳ್ಳಬಾರದು? ರಾಮದೇವ್ ಅವರು ವಿಚಾರಣಾ ಆಯೋಗ ನೇಮಕ ಮಾಡಬೇಕೆಂದು ಹೇಳಿದ್ದಾರೆ. ಅಧಿಕಾರಿಗಳ ಮಟ್ಟದಲ್ಲಿ ಮೂರು ತಿಂಗಳೊಳಗಾಗಿ ಇದರ ಬಗ್ಗೆ ತನಿಖೆ ನಡೆಸಿ ಇದು ಹೇಗಾಯಿತು, ಇದಕ್ಕೆ ಯಾರು ಕಾರಣರು ಎಂಬ ಬಗ್ಗೆ ವರದಿ ಸಲ್ಲಿಸುವಂತೆ ಏರ್ಪಾಡು ಮಾಡಿ.

ಜನವರಿ ೧೯೭೫ಕ್ಕೆ ನಮ್ಮ ಅವಧಿ ಮುಗಿಯಿತು, ನಂತರ ಚುನಾವಣೆ ನಡೆಸಲೇ ಇಲ್ಲ. ಕಾರ್ಪೊರೇಷನ್ ವ್ಯವಹಾರಗಳ ಬಗ್ಗೆ ತಿಳಿದುಕೊಳ್ಳುವುದಕ್ಕೆ ಸತತವಾಗಿ ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕೆ ನೀವು ಕಾರಣರಲ್ಲ. ಇದನ್ನು ತನಿಖೆ ಮಾಡಿಸಬಹುದಾಗಿತ್ತು ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರ ಮಾಡ್ಬಿಕೊಳ್ಳುವಂತಾದ್ದು ಏನಿದೆ ಎಂದು ಕೇಳುತ್ತೇನೆ.

ಶ್ರೀ ಪಿ. ರಾಂದೇವ್. — ಸ್ವಾಮಿ, ತಾವು ಮಂತ್ರಿಗಳಾಗಿ ಬಂದಮೇಲೆ, ಅಂದರೆ ೧೯೮೦ರ ಮೇಲೆ ಕೊಟ್ಟಿಲ್ಲ. ಹಿಂದೆ ಆಗಿರುವುದರಲ್ಲಿ ಸೀರಿಯಸ್ ಫ್ರಾಡ್ ಆಗಿದೆ. ಬೈಲಾ ವಿರುದ್ಧವಾಗಿ ಕೊಟ್ಟಿದ್ದಾರೆ. ಹೈಕೋರ್ಟು ಜಡ್ಜ್‌ಮೆಂಟ್ ಬಂದಮೇಲೆ, ಮುಖ್ಯಮಂತ್ರಿಯವರ ಡೆಪ್ಯೂಟಿ ಸೆಕ್ರೆಟರಿ ಪಾಂಡೆಯವರು ಪತ್ರ ಬರೆಯುತ್ತಾರೆ. The Government desires that he should not interfere with the construction. The Commissioner was called to the Chief Minister's Chamber and was warned. ಇದಕ್ಕೆ ಪ್ರಸೆಂಟ್ ಕಮಿಷನರ್ ಏನು ಹೇಳುತ್ತಾರೆ.

ಶ್ರೀ ಧರ್ಮಸಿಂಗ್. — ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಗಮನಕ್ಕೆ ಬಂದಿರುವುದು ಸತ್ಯಕ್ಕೆ ದೂರವಾದುದೆಂದು ನೇರವಾಗಿ ಹೇಳಬೇಕಾಗುತ್ತದೆ. ಫೇವರ್ ಆಗಿ ಏನೂ ಮಾಡಿಲ್ಲ. ಕಮೀಷನರ್ ರವರಿಗೆ ಯಾವ ರೀತಿಯ ಆದೇಶವೂ ಹೋಗಿಲ್ಲ.

SRI P. RAMDEV.—The letter written by Sri K.P. Pandey, Deputy Secretary of the Chief Minister's Secretariat is in the file.

ಶ್ರೀ ಧರ್ಮಸಿಂಗ್.— ಗಗನಚುಂಬಿ ಕಟ್ಟಡಗಳನ್ನು ಕಟ್ಟುವುದರ ಬಗ್ಗೆ ಈಗಾಗಲೇ ತೀವ್ರವಾದ ಕ್ರಮ ತೆಗೆದುಕೊಂಡಿದ್ದೇವೆ ಈ ವಿಷಯದಲ್ಲಿ ಹೈಕೋರ್ಟು ಜಡ್ಜ್‌ಮೆಂಟ್ ಕೂಡ ಆಗಿದೆ. ಮತ್ತೆ ವಿರೋಧ ಪಕ್ಷದ ನಾಯಕರು ಕಾರ್ಪೊರೇಷನ್ನಿನಲ್ಲಿ ಆಗಿರತಕ್ಕ ಅನಾಹುತಗಳ ಬಗ್ಗೆ ಏನು ಹೇಳಿದ್ದಾರೆ ಇದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಈ ವಿಚಾರದಲ್ಲಿ ವಿಪರೀತವಾದ ವರದಿಯನ್ನು ತರಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ರ್ಯಾಫ್ಟ್ ರೂಲ್ಸ್ ಮಾಡಿದ್ದೀರಿ, ನಿಮ್ಮ ಸರ್ಕಾರ ಬಿಡಿ, ಮೇಲೆ ಅಪ್ಲಿಕೇಷನ್ ಮಾಡಿ, ಅಪ್ಲಿಕೇಷನ್ ಕರೆದಿದ್ದೀರಿ. ಒಂದೂವರೆ ವರ್ಷದಿಂದ ಏತಕ್ಕೆ ಫೈನಲ್ ಮಾಡಿಲ್ಲ. ಇದನ್ನು ಫೈನಲೈಸ್ ಮಾಡುವುದಕ್ಕೆ ಮುಂಚೆ ೫-೬ ಕಟ್ಟಡಗಳಿಗೆ ಲೈಸನ್ಸ್ ಕೊಟ್ಟಿದ್ದೀರಿ

ಶ್ರೀ ಧರ್ಮಸಿಂಗ್.— ಎಕ್ಸಿಕ್ಯೂಟೀವ್ ಆರ್ಡರ್ ನಿಲ್ಲಿಸಿಬಿಟ್ಟಿದ್ದೇವೆ. ಡ್ರಾಫ್ಟ್ ರೂಲ್ಸ್ ಮಾ. ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿ, ಅಲ್ಲಿಂದ ಹೋಂ ಡಿಪಾರ್ಟ್‌ಮೆಂಟಿಗೆ ಕಳುಹಿಸಿದ್ದೇವೆ. ಅಲ್ಲಿಂದ ಬಂದ ಕೂಡಲೇ ತೀರ್ಮಾನ ಮಾಡುತ್ತೇವೆ.

LEGISLATIVE BUSINESS

The City of Mysore Improvement (Amendment) Bill, 1982.

Leave to Introduce

SRI DHARAM SINGH (Minister for Housing and Urban Development).—Sir, I beg to move.

"That leave be granted to introduce the City of Mysore Improvement (Amendment) Bill, 1982.'

MR. SPEAKER.— The question is :

"That leave be granted to introduce the City of Mysore Improvement (Amendment) Bill, 1982.

The Motion was adopted and leave was granted

SRI DHARAM SINGH (Minister for Housing and Urban Development).— Sir, I introduce the City of Mysore Improvement (Amendment) Bill, 1982.

MR. SPEAKER.— The Bill is introduced. *

FINANCIAL BUSINESS

Discussion and voting on the Demands for Grants for the year 1982-83 Demand Nos. 14, 16 etc.

ಅಧ್ಯಕ್ಷರು.—ಇವತ್ತು ಮಂತ್ರಿಗಳು ಉತ್ತರ ಹೇಳಬೇಕಾಗಿದೆ. ಇನ್ನು ಮೂರು ಜನ ಮಾತನಾಡುವವರಿದ್ದಾರೆ. ತಮಗೆ ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.— ಳಿಜಿ ನಿಮಿಷ ಸಾಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ (ಸೊರಬ) — ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಯನ್ನು ವಿರೋಧಿಸಿ ಮಾತನಾಡುವುದಕ್ಕೆ ನಿಂತಿದ್ದೇನೆ. ರಾಜ್ಯದ ಬೊಕ್ಕಸಕ್ಕೆ ಜಾಸ್ತಿ ಹಣವನ್ನು ಕೂಡಿಸತಕ್ಕಂಥ ಸ್ಪಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ದಿಸೆಯಲ್ಲಿ ಮಾನ್ಯ ಮಂತ್ರಿಯವರಿಗೆ ಚಿಂತನೆ ಇರಬೇಕು. ಅನೇಕ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಜಾರಿಗೆ ತರತಕ್ಕಂಥ ಮಾತನ್ನು ಸರ್ಕಾರ ಪದೇ ಪದೇ ಹೇಳುತ್ತಿದೆ. ರಾಜ್ಯ ಸರ್ಕಾರಕ್ಕೆ ಬರಬಹುದಾದಂಥ ಈ ಹಣವನ್ನು ಪ್ರಾಮಾಣಿಕವಾಗಿ ವಸೂಲು ಮಾಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಸಮಾಜದ ಯಾವ ಯಾವ ವರ್ಗಗಳಿಂದ ಹಣ ಬರಬೇಕಾಗಿದೆ, ಅದನ್ನು ವಸೂಲು ಮಾಡಿ, ಆಡಳಿತವನ್ನು ನಡೆಸತಕ್ಕಂಥ ಜವಾಬ್ದಾರಿ ಸರ್ಕಾರಕ್ಕೆ ಸೇರಿದ್ದು. ಈ ವಿಚಾರದಲ್ಲಿ ಸದನದ ಎಲ್ಲ ಪಕ್ಷಗಳಿಂದಲೂ ಸಂಪೂರ್ಣವಾದ ಸಹಕಾರವನ್ನು ಕೊಡಬೇಕಾಗುತ್ತದೆ. ಮಾನ್ಯ ಸಚಿವರುಗಳು ಕೂಡ ಸರ್ಕಾರ ಕೈಗೊಂಡಿರತಕ್ಕಂಥ ಕಾರ್ಯಕ್ರಮಗಳ ಅಭಿವೃದ್ಧಿಗಾಗಿ ಸಂಪನ್ಮೂಲಗಳ ಬಗ್ಗೆ ಹೆಚ್ಚು